**<u>ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕೆ.ಆರ್.ನಗರ</u>**

**<u>ಸಿ.ಸಿ. ನಂ. 1518/2022</u>**

**ಫಿರ್ಯಾದಿಃ** ಸಾಲಿಗ್ರಾಮ ಪೊಲೀಸರು

**ವಿರುದ್ಧ**

**ಆರೋಪಿತರುಃ**

1. ನವೀನ್ ಕುಮಾರ್ ಬಿನ್ ನಾಗೇಗೌಡ, 50 ವರ್ಷ,
ನಂ.203, 3 ನೇ ಕ್ರಾಸ್, 13 ನೇ ಬ್ಲಾಕ್,
ನಾಗರಬಾವಿ, ಬೆಂಗಳೂರು.

2. ವಾಸು ಬಿನ್ ಲೇಟ್ ಬೋರೇಗೌಡ, 63 ವರ್ಷ,
ಮಹಿಳಾ ಸಮಾಜ ರೋಡ್, ಮಿರ್ಲೆ ಗ್ರಾಮ,
ಕೆ.ಆರ್.ನಗರ ತಾಲ್ಲೂಕು.

3. ನವೀನ ಬಿನ್ ಲೇಟ್ ರಮೇಶ, 40 ವರ್ಷ,
ಬ್ರಾಹ್ಮಿಣ್ ಸ್ಟ್ರೀಟ್, ಸಾಲಿಗ್ರಾಮ ಟೌನ್,
ಸಾಲಿಗ್ರಾಮ ತಾಲ್ಲೂಕು,

**<u>ದೋಷಾರೋಪಣೆ</u>**

**ಶ್ರೀ ಚಂದನ್ ಎಸ್, ಬಿ.ಕಾಂ., ಎಲ್.ಎಲ್.ಬಿ.** ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿ ನ್ಯಾಯಾಧೀಶರು, ಕೆ.ಆರ್.ನಗರ, ಆದ ನಾನು ಮೇಲ್ಕಂಡ ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಗಿನಂತೆ ಆರೋಪಿಸುವುದೇನೆಂದರೆಃ

ಮೊದಲನೆಯದಾಗಿ ದಿನಾಂಕಃ 18.04.2022 ರಂದು ಮಧ್ಯಾಹ್ನ 01.30 ಗಂಟೆ ಸಮಯದಲ್ಲಿ ಸಾಲಿಗ್ರಾಮ ಪೋಲೀಸ್ ಠಾಣೆಯ ಸರಹದ್ದಿಗೆ ಸೇರಿದ ಚಿಕ್ಕನಾಯಕನಹಳ್ಳಿ ಗ್ರಾಮದ ಎಲ್ಲೆಗೆ ಸೇರಿದ ಸರ್ವೆ ನಂ. 24/3 ರ ಜಮೀನಿನ ಬಳಿ ಚಾಂದಿನಿ, ಮಂಜುಳ ಮತ್ತು ಜ್ಯೋತಿ ರವರು ಇದ್ದಾಗ 1 ಮತ್ತು 2 ನೇ ಆರೋಪಿತರಾದ ನವೀನ್ ಕುಮಾರ್ ಮತ್ತು ವಾಸು ಆದ ನೀವುಗಳು ಅವರನ್ನು ನೋಡಿ ಬಾಯಿಗೆ ಬಂದಂತೆ ಸೂಳೇ ಮುಂಡೇರಾ, ಲೋಫರ್ ಮುಂಡೇರಾ, ಬೋಸಡಿ ಮುಂಡೇರಾ ಎಂದು ಅವಾಚ್ಯ ಶಬ್ದಗಳಿಂದ ಬೈಯ್ಯುವುದರ ಮೂಲಕ ಭಾ.ದಂ.ಸಂ.ಕಲಂ. 504 ಸಹವಾಚಕ ಕಲಂ 34 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿರುವ ದಿನಾಂಕ, ಸ್ಥಳ ಹಾಗೂ ಸಮಯದಂದು 2 ಮತ್ತು 3 ನೇ ಆರೋಪಿತರಾದ ವಾಸು ಮತ್ತು ನವೀನ್ ಆದ ನೀವುಗಳು ಚಾಂದಿನಿ ರವರನ್ನು ಹಿಡಿದುಕೊಂಡು ಎಳೆದಾಡಿ ದೇಹವನ್ನು ಎಲ್ಲಿ ಬೇಕಾದರಲ್ಲಿ ಮುಟ್ಟಿ ಸಾರ್ವಜನಿಕವಾಗಿ ಅವಮಾನಗೊಳಿಸುವುದರ ಮೂಲಕ ಭಾ.ದಂ.ಸಂ.ಕಲಂ. 354 ಸಹವಾಚಕ ಕಲಂ 34 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿರುವ ದಿನಾಂಕ, ಸ್ಥಳ ಹಾಗೂ ಸಮಯದಂದು 2 ಮತ್ತು 3 ನೇ ಆರೋಪಿತರಾದ ವಾಸು ಮತ್ತು ನವೀನ್ ಆದ ನೀವುಗಳು ಕೈಯಿಂದ ಚಾಂದಿನಿ ರವರ ಬೆನ್ನಿಗೆ ಹೊಡೆದು ಕೆಳಗೆ ಬೀಳಿಸಿ ಸೊಂಟಕ್ಕೆ ನೋವುಂಟು ಮಾಡುವುದರ ಮೂಲಕ ಭಾ.ದಂ.ಸಂ.ಕಲಂ. 323 ಸಹವಾಚಕ ಕಲಂ 34 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ನಾಲ್ಕನೆಯದಾಗಿ ಮೇಲೆ ಹೇಳಿರುವ ದಿನಾಂಕ, ಸ್ಥಳ ಹಾಗೂ ಸಮಯದಂದು 3 ನೇ ಆರೋಪಿಯಾದ ನವೀನ್ ಆದ ನೀವು ಚಾಂದಿನಿ ರವರಿಗೆ ಜಮೀನನ್ನು ನಾನೇ ಉಳುಮೆ ಮಾಡುತ್ತಿರುವುದು ನೀವು ಯಾರು ನನ್ನನ್ನು ಕೇಳುವುದಕ್ಕೆ ಎಂದು ಚಾಂದಿನಿರವರನ್ನು ಮುಂದೆ ಹೋಗದಂತೆ ಅಡ್ಡಗಟ್ಟಿ ನಿಲ್ಲಿಸುವುದರ ಮೂಲಕ ಭಾ.ದಂ.ಸಂ.ಕಲಂ. 341 ಸಹವಾಚಕ ಕಲಂ 34 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿರುವ ದಿನಾಂಕ, ಸ್ಥಳ ಹಾಗೂ ಸಮಯದಂದು 1 ನೇ ಆರೋಪಿ ನವೀನ್ ಕುಮಾರ್ ಆದ ನೀವು ಚಾಂದಿನಿ ಮತ್ತು ಮಂಜುಳ ರವರಿಗೆ ನಿಮ್ಮಗಳನ್ನು ಬಿಡುವುದಿಲ್ಲ ಕೊಲೆ ಮಾಡುತ್ತೇವೆ ಎಂದು ಕೊಲೆಬೆದರಿಕೆ ಹಾಕುವುರದ ಮೂಲಕ ಭಾ.ದಂ.ಸಂ.ಕಲಂ. 506 ಸಹವಾಚಕ ಕಲಂ 34 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಸದರಿ ಮೇಲಿನ ಆರೋಪಗಳ ಬಗ್ಗೆ ನಿಮ್ಮನ್ನು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಪಡಿಸಿರುತ್ತೇನೆ.

**ಆಪಾದನೆ**

ಪ್ರಶ್ನೆ-1 ಈಗ ನಿಮಗೆ ಓದಿ ಹೇಳಲಾದ ಆಪಾದನೆ ತಿಳಿಯಿತೇ?

ಉತ್ತರಃ 1 ನೇ ಆರೋಪಿಃ

2 ನೇ ಆರೋಪಿಃ

3 ನೇ ಆರೋಪಿಃ

ಪ್ರಶ್ನೆ-2 ಮೇಲ್ಕಂಡ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ 1 ನೇ ಆರೋಪಿಃ

2 ನೇ ಆರೋಪಿಃ

3 ನೇ ಆರೋಪಿಃ

ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ಓದಿ ಹೇಳಿದ್ದು ಅವರು ಉತ್ತರಿಸಿದಂತೆಯೇ ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿದ್ದು ಆರೋಪಿಗಳು ನೀಡಿರುವ ಉತ್ತರವು ಸಂಪೂರ್ಣ ಹಾಗೂ ಸರಿಯಾದ ಮಾಹಿತಿ ಒಳಗೊಂಡಿದೆ ಎಂದು ನಾನು ಈ ಮೂಲಕ ದೃಢೀಕರಿಸುತ್ತೇನೆ.

(ಚಂದನ್ ಎಸ್)
ಹೆಚ್ಚುವರಿ ಸಿವಿಲ್ ಮತ್ತು ನ್ಯಾಯಿಕ ದಂಡಾಧಿಕಾರಿಗಳು,
ಕೆ.ಆರ್.ನಗರ.

ಆರೋಪಿತರ ಸಹಿಗಳುಃ

1 ನೇ ಆರೋಪಿಃ

2 ನೇ ಆರೋಪಿಃ

3 ನೇ ಆರೋಪಿಃ

ದಿನಾಂಕಃ 28.07.2023